# NIKE, Inc. ನೀತಿ ಸಂಹಿತೆಯು

Nike ನಲ್ಲಿ, ಅಂತಿಮ ರೇಖೆಯಿಲ್ಲದಿದ್ದರೂ, ಅಲ್ಲೊಂದು ಸ್ಪಷ್ಟವಾದ ಆರಂಭ ರೇಖೆ ಇದೆ ಎಂಬುದರಲ್ಲಿ ನಮಗೆ ನಂಬಿಕೆಯಿದೆ.

ಗುತ್ತಿಗೆ ಕಾರ್ಖಾನೆಗಳೊಂದಿಗೆ ನಮ್ಮ ಕೆಲಸವು ಯಾವತ್ತಿಗೂ ವೃದ್ಧಿಯಾಗುತ್ತಿದೆ ಎಂಬುದನ್ನು ಅರಿತುಕೊಂಡು, ಈ ನೀತಿ ಸಂಹಿತೆಯು ನಮ್ಮ ಕಾರ್ಖಾನೆಯ ವಿತರಕರ ಬಗ್ಗೆ ನಮಗಿರುವ ನಿರೀಕ್ಷೆಗಳನ್ನು ಸ್ಪಷ್ಟಪಡಿಸುತ್ತದೆ ಮತ್ತು ವರ್ಧಿಸುತ್ತದೆ ಹಾಗೂ ಪ್ರತಿಯೊಂದು ಕಾರ್ಖಾನೆಯೂ ಅನುಸರಿಸಬೇಕಾದ ಕನಿಷ್ಠ ಮಾನದಂಡಗಳನ್ನು ನಿರೂಪಿಸುತ್ತದೆ.

NIKE, Inc. ನ ಸಂಪನ್ಮೂಲ ಪೂರೈಕೆ ತಂತ್ರಗಳನ್ನು ನಾವು ಹೇಗೆ ಅನುಷ್ಠಾನಗೊಳಿಸಬೇಕು, ಕಾರ್ಖಾನೆಗಳ ನಿರ್ವಹಣೆಯನ್ನು ಹೇಗೆ ಮೌಲ್ಯಮಾಪನ ಮಾಡಬೇಕು, ಮತ್ತು ಯಾವ ಕಾರ್ಖಾನೆಗಳೊಂದಿಗೆ Nike ಒಡನಾಟವನ್ನು ಮುಂದುವರಿಸಬೇಕೆಂಬುದನ್ನು ನಾವು ಗುರುತಿಸಬೇಕು ಮತ್ತು ನಮ್ಮ ವಹಿವಾಟನ್ನು ವೃದ್ಧಿಸುವುದು ಹೇಗೆ ಎಂಬುದಕ್ಕೆ ಈ ಮಾನದಂಡಗಳನ್ನು ಅವಿಭಾಜ್ಯ ಅಂಗವಾಗಿ ಬಳಸುವುದು ನಮ್ಮ ಉದ್ದೇಶವಾಗಿರುತ್ತದೆ.

ಸಂಪನ್ಮೂಲ ಪೂರೈಕೆ ಮತ್ತು ತಯಾರಿಕೆಯಲ್ಲಿ ನಾವು ನಮ್ಮ ವ್ಯಾವಹಾರಿಕ ಆದರ್ಶಗಳನ್ನು ರೂಪಿಸುವಾಗ, ಈ ಕನಿಷ್ಠ ಮಾನದಂಡಗಳನ್ನು ಅನುಸರಿಸುವುದು ತಯಾರಿಕಾ ಮುಂದಾಳುತ್ವ, ನಿರಂತರ ಸುಧಾರಣೆ ಮತ್ತು ಸ್ವಯಂ-ಆಡಳಿತವು ತಳಹದಿ ಎಂಬುದನ್ನು ಅರಿತುಕೊಳ್ಳುವ ಕಾರ್ಖಾನೆಗಳೊಂದಿಗೆ ನಾವು ಕೆಲಸ ಮಾಡುವ ಉದ್ದೇಶ ಹೊಂದಿದ್ದೇವೆ.

ಸಂಹಿತೆಯಾಚೆಗೆ, ನಮ್ಮ ಗುತ್ತಿಗೆ ಕಾರ್ಖಾನೆಗಳಿಗೆ **ಅವಲಂಬಿತ, ಹಸಿರುಭರಿತ, ಹೆಚ್ಚು ಸಶಕ್ತ ಮತ್ತು ನ್ಯಾಯೋಚಿತವಾದ ವಿತರಣಾ ಸರಣಿಯನ್ನು ನಿರ್ಮಿಸಲು ಸಹಾಯ ಮಾಡುವ ನಿಟ್ಟಿನಲ್ಲಿ ನಮ್ಮ ಗುತ್ತಿಗೆ ಕಾರ್ಖಾನೆಗಳೊಂದಿಗೆ ಕೈಜೋಡಿಸಲು Nike ಬದ್ಧವಾಗಿರುತ್ತದೆ.**

ಮತ್ತು ನಾವು ಕಾರ್ಯಾಚರಣೆ ಮಾಡುತ್ತಿರುವ ದೇಶಗಳಲ್ಲಿ ಕಾರ್ಮಿಕ ಮತ್ತು ಪರಿಸರ ಪರಿಸ್ಥಿತಿಗಳ ವ್ಯವಸ್ಥಿತ ಬದಲಾವಣೆಯನ್ನು ತರಲು ನಾಗರಿಕ ಸಮಾಜ, ಸರಕಾರಗಳು, ಮತ್ತು ಖಾಸಗಿ ವಲಯದೊಂದಿಗೆ ಕೈಜೋಡಿಸುವುದನ್ನು ನಾವು ಮುಂದುವರಿಸುತ್ತೇವೆ.

ತ್ಯಾಜ್ಯ ಕಡಿಮೆ ಮಾಡುವುದು, ಸಂಪನ್ಮೂಲಗಳನ್ನು ಜವಾಬ್ದಾರಿಯುತವಾಗಿ ಬಳಸುವುದು, ಕಾರ್ಮಿಕರ ಹಕ್ಕುಗಳನ್ನು ಬೆಂಬಲಿಸುವುದು, ಮತ್ತು ಕಾರ್ಮಿಕರು ಹಾಗೂ ಸಮುದಾಯಗಳ ಕಲ್ಯಾಣ ಕಾರ್ಯಕ್ರಮಗಳಿಗಾಗಿ ಶ್ರಮಿಸುವ ಗುರಿಗಳಿಗೆ Nike ನ ಬದ್ಧತೆಯನ್ನು ನಮ್ಮ ಗುತ್ತಿಗೆ ಕಾರ್ಖಾನೆಗಳೂ ಹಂಚಿಕೊಳ್ಳಬೇಕೆಂದು ನಾವು ನಿರೀಕ್ಷಿಸುತ್ತೇವೆ. ಇದನ್ನು ಸಾಧ್ಯವಾಗಿಸಲು ಪಾರದರ್ಶಕತೆ, ಸಹಯೋಗ ಮತ್ತು ಪರಸ್ಪರ ಗೌರವದ ಆಧಾರದಲ್ಲಿರುವ ಪಾಲುದಾರಿಕೆಗಳು ಅತ್ಯಗತ್ಯ ಎಂದು ನಾವು ನಂಬುತ್ತೇವೆ.

ನಮ್ಮ ನೀತಿ ಸಂಹಿತೆಯು ಈ ಗುರಿಗಳನ್ನು ತಲುಪಲು ಅತ್ಯಗತ್ಯವೆಂದು ನಾವು ನಂಬುವ ಈ ಕೆಳಗಿನ ನಿರ್ದಿಷ್ಟವಾದ ಕನಿಷ್ಠ ಮಾನದಂಡಗಳಿಗೆ ನಮ್ಮ ಗುತ್ತಿಗೆ ಕಾರ್ಖಾನೆಗಳನ್ನು ಬದ್ಧವಾಗಿಸುತ್ತವೆ.

## ಉದ್ಯೋಗವು ಸ್ವಯಂಪ್ರೇರಿತ

ಗುತ್ತಿಗೆದಾರರು ಕಾರಾಗೃಹದ ದುಡಿಮೆ, ಕರಾರಿನ ದುಡಿಮೆ, ಜೀತದ ದುಡಿಮೆ ಅಥವಾ ಇತರ ಯಾವುದೇ ರೀತಿಯ ಜೀತದ ದುಡಿಮೆಯೂ ಸೇರಿದಂತೆ ಬಲವಂತದ ದುಡಿಮೆಯನ್ನು ಬಳಸುವುದಿಲ್ಲ. ವಿದೇಶೀ ಕಾರ್ಮಿಕರ ನೇಮಕಾತಿ ಶುಲ್ಕಗಳೂ ಸೇರಿದಂತೆ, ಅವರ ನೌಕರಿಯ ಅರ್ಹತೆಯ ಶುಲ್ಕಗಳಿಗೆ ಗುತ್ತಿಗೆದಾರರು ಜವಾಬ್ದಾರರಾಗಿರುತ್ತಾರೆ.

## ನೌಕರರ ವಯೋಮಿತಿ 16 ಅಥವಾ ಹೆಚ್ಚು

ಗುತ್ತಿಗೆದಾರರು ಕನಿಷ್ಠ 16 ವರ್ಷ ಅಥವಾ ಕಡ್ಡಾಯ ಶಿಕ್ಷಣ ಪೂರ್ಣಗೊಳಿಸುವ ವಯಸ್ಸು ಅಥವಾ ಆಯಾ ದೇಶದ ಕಾರ್ಮಿಕತನದ ಕಾನೂನುಬದ್ಧ ವಯಸ್ಸು, ಯಾವುದು ಹೆಚ್ಚೋ ಅದರ ಆಧಾರದ ಮೇಲೆ ಕಾರ್ಮಿಕರನ್ನು ನಿಯೋಜಿಸಬೇಕು. ಅಪಾಯಕಾರಿ ಕಾರ್ಯಕ್ಷೇತ್ರಗಳಲ್ಲಿ 18 ಕ್ಕಿಂತ ಕಡಿಮೆ ವಯಸ್ಸಿನ ಉದ್ಯೋಗಿಗಳನ್ನು ನೇಮಿಸಲಾಗುವುದಿಲ್ಲ.

## ಗುತ್ತಿಗೆದಾರರು ಭೇದಭಾವ ತೋರುವುದಿಲ್ಲ

ಲಿಂಗ, ವರ್ಗ, ಧರ್ಮ, ವಯಸ್ಸು, ಅಂಗವಿಕಲತೆ, ಲೈಂಗಿಕ ಸ್ಥಿತಿ, ಗರ್ಭಿಣಿಸ್ಥಿತಿ, ವೈವಾಹಿಕ ಸ್ಥಿತಿ, ರಾಷ್ಟ್ರೀಯತೆ, ರಾಜಕೀಯ ಅಭಿಪ್ರಾಯ, ಕಾರ್ಮಿಕ ಸಂಘಗಳ ಸದಸ್ಯತ್ವ, ಸಾಮಾಜಿಕ ಅಥವಾ ಜನಾಂಗೀಯ ಮೂಲ ಅಥವಾ ದೇಶದ ಕಾನೂನಿನಿಂದ ರಕ್ಷಿತವಾಗಿರುವ ಇತರ ಯಾವುದೇ ಸ್ಥಾನಮಾನಗಳ ಆಧಾರದಲ್ಲಿ ಕೂಲಿ, ಪರಿಹಾರ, ಬಡ್ತಿ ಅಥವಾ ಶಿಸ್ತು ಸೇರಿದಂತೆ, ಗುತ್ತಿಗೆದಾರರ ನೌಕರರು ಉದ್ಯೋಗದಲ್ಲಿ ಯಾವುದೇ ರೀತಿಯ ಭೇದಭಾವಕ್ಕೆ ಒಳಗಾಗುವುದಿಲ್ಲ.

## ಒಕ್ಕೂಟ ಮತ್ತು ಸಾಮುದಾಯಿಕ ಚೌಕಾಸಿಯ ಸ್ವಾತಂತ್ರ್ಯವನ್ನು ಗೌರವಿಸಲಾಗುತ್ತದೆ

ಉತ್ಪಾದನಾ ದೇಶದಲ್ಲಿನ ಕಾನೂನುಗಳಡಿ ಅನುಮತಿಸಲಾದ ಮಟ್ಟಿಗೆ, ತನ್ನ ನೌಕರರ ಒಕ್ಕೂಟ ಮತ್ತು ಸಾಮುದಾಯಿಕ ಚೌಕಾಸಿ ಸ್ವಾತಂತ್ರ್ಯವನ್ನು ಗುತ್ತಿಗೆದಾರರು ಗೌರವಿಸುತ್ತಾರೆ. ಇದು ಯಾವುದೇ ದೌರ್ಜನ್ಯ, ಮಧ್ಯಪ್ರವೇಶ ಅಥವಾ ಪ್ರತೀಕಾರಾತ್ಮಕ ಕ್ರಮಗಳಿಲ್ಲದೆ ಸ್ವಂತ ಆಯ್ಕೆಯಿಂದ ಕಾರ್ಮಿಕ ಸಂಘಗಳು ಹಾಗೂ ಇತರ ಕಾರ್ಮಿಕ ಸಂಘಟನೆಗಳನ್ನು ರಚಿಸುವುದನ್ನು ಮತ್ತು ಸೇರುವುದನ್ನು ಒಳಗೊಂಡಿರುತ್ತದೆ.

## ವೇತನ ಮತ್ತು ಸೌಲಭ್ಯಗಳನ್ನು ಸೂಕ್ತಕಾಲದಲ್ಲಿ ವಿತರಿಸಲಾಗುತ್ತದೆ

ದೇಶದ ಕಾನೂನಿನಲ್ಲಿ ಅಗತ್ಯವಾಗಿರುವ ಕನಿಷ್ಠ ವೇತನವನ್ನಾದರೂ ಗುತ್ತಿಗೆದಾರರ ನೌಕರರಿಗೆ ಸಕಾಲದಲ್ಲಿ ಪಾವತಿಸಲಾಗುತ್ತದೆ ಮತ್ತು ರಜಾದಿನಗಳು ಮತ್ತು ರಜೆಗಳನ್ನು, ಶಾಸನಬದ್ಧವಾಗಿ ಕಡ್ಡಾಯವಾಗಿರುವ ಲಾಭಗಳನ್ನು ಹಾಗೂ ಉದ್ಯೋಗ ಅವಧಿ ಕೊನೆಗೊಂಡಾಗ ಶಾಸನಬದ್ಧವಾದ ಕರಾರು ಸಮಾಪ್ತಿ ವೇತನವನ್ನು ಒದಗಿಸಲಾಗುತ್ತದೆ. ವೇತನದಿಂದ ಯಾವುದೇ ಶಿಸ್ತುಕ್ರಮದ ಕಡಿತಗಳು ಇರುವುದಿಲ್ಲ.

## ದೌರ್ಜನ್ಯ ಅಥವಾ ದುರ್ಬಳಕೆಗಳನ್ನು ಸಹಿಸಲಾಗುವುದಿಲ್ಲ

ಗುತ್ತಿಗೆದಾರರ ನೌಕರರನ್ನು ಘನತೆ ಮತ್ತು ಗೌರವದಿಂದ ನೋಡಿಕೊಳ್ಳಲಾಗುತ್ತದೆ. ನೌಕರರನ್ನು ದೈಹಿಕ, ಲೈಂಗಿಕ, ಮನೋವೈಜ್ಞಾನಿಕ ಅಥವಾ ಬೈಗುಳದ ದೌರ್ಜನ್ಯ ಅಥವಾ ದುರ್ಬಳಕೆಗೆ ಒಳಪಡಿಸಲಾಗುವುದಿಲ್ಲ.

## ಕೆಲಸದ ಅವಧಿಯು ಅಧಿಕವಾಗಿ ಇರುವುದಿಲ್ಲ

ಗುತ್ತಿಗೆದಾರರ ನೌಕರರು ವಾರಕ್ಕೆ 60 ಗಂಟೆಗಿಂತ, ಅಥವಾ ಉತ್ಪಾದನಾ ದೇಶದ ಕಾನೂನುಗಳಡಿ ಅನುಮತಿಸಲಾಗಿರುವ ನಿಯಮಿತ ಹಾಗೂ ಓವರ್‌ಟೈಂ ಗಂಟೆಗಳಿಗಿಂತ, ಯಾವುದು ಕಡಿಮೆಯೋ ಅದಕ್ಕಿಂತ ಹೆಚ್ಚು ಗಂಟೆ ಕೆಲಸ ಮಾಡುವುದಿಲ್ಲ. ಯಾವುದೇ ಓವರ್‌ಟೈಂ ಗಂಟೆಗಳು ಒಮ್ಮತಾಭಿಪ್ರಾಯದಿಂದ ಇರುತ್ತವೆ ಮತ್ತು ಪ್ರೀಮಿಯಂ ದರದಲ್ಲಿ ಪರಿಹಾರವನ್ನೂ ನೀಡಲಾಗುತ್ತದೆ. ಪ್ರತೀ ಏಳು-ದಿನದ ಅವಧಿಯಲ್ಲಿ ನೌಕರರಿಗೆ ಕನಿಷ್ಠ 24 ಸತತ ಗಂಟೆಗಳ ವಿರಾಮವನ್ನು ನೀಡಲಾಗುತ್ತದೆ.

## ಖಾಯಂ ನೌಕರಿ ಒದಗಿಸಲಾಗುತ್ತದೆ

ದೇಶದ ಕಾನೂನು ಮತ್ತು ಶಿಷ್ಟಾಚಾರದ ಮೂಲಕ ಸ್ಥಾಪಿಸಲಾದ ಮಾನ್ಯವಾದ ನೌಕರಿ ಸಂಬಂಧದ ಅಧಾರದಲ್ಲಿ ಕೆಲಸ ನಿರ್ವಹಿಸಲಾಗುತ್ತದೆ. Nike-ಬ್ರ್ಯಾಂಡ್ ಅಥವಾ ಸಂಬಂಧಿತ ಉತ್ಪನ್ನದ ಉತ್ಪಾದನೆಗಾಗಿ ಗುತ್ತಿಗೆದಾರ ಯಾವುದೇ ಮನೆಕೆಲಸದ ವ್ಯವಸ್ಥೆಯ ಬಳಕೆ ಮಾಡುವುದಿಲ್ಲ.

## ಕಾರ್ಯಸ್ಥಳವು ಆರೋಗ್ಯಕರ ಮತ್ತು ಸುರಕ್ಷಿತವಾಗಿರುತ್ತದೆ

ಗುತ್ತಿಗೆದಾರರು ಸುರಕ್ಷಿತ, ನಿರ್ಮಲ ಮತ್ತು ಆರೋಗ್ಯಕರ ಕಾರ್ಯಸ್ಥಳ ವ್ಯವಸ್ಥೆಯನ್ನು ಒದಗಿಸುತ್ತಾರೆ ಮತ್ತು ಅಲ್ಲಿ ಕೆಲಸದ ಸಂದರ್ಭದಲ್ಲಿ ಸಂಭವಿಸಬಹುದಾದ ಅಥವಾ ಅದಕ್ಕೆ ಸಂಬಂಧಿಸಿದ ಅಥವಾ ಗುತ್ತಿಗೆದಾರರ ಸೌಲಭ್ಯಗಳ ಕಾರ್ಯಾಚರಣೆಯ ಪರಿಣಾಮವಾಗಿ ಉಂಟಾಗಬಹುದಾದ ಅಪಘಾತಗಳು ಹಾಗೂ ಗಾಯ ಉಂಟಾಗುವುದನ್ನು ತಡೆಯಲು ಸೂಕ್ತವಾದ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ. ಎಲ್ಲ ನೌಕರರ ಸುರಕ್ಷತೆ ಹಾಗೂ ಆರೋಗ್ಯದ ಸಂಭವನೀಯ ಅಪಾಯಗಳನ್ನು ಪತ್ತೆ ಹಚ್ಚುವ, ತಡೆಯುವ ಮತ್ತು ಪ್ರತಿಸ್ಪಂದಿಸುವ ವ್ಯವಸ್ಥೆಗಳನ್ನು ಗುತ್ತಿಗೆದಾರರು ಹೊಂದಿರುತ್ತಾರೆ.

## ಪರಿಸರದ ಮೇಲಿನ ಪ್ರಭಾವ ಕನಿಷ್ಠಗೊಳಿಸಲಾಗುತ್ತದೆ

ವಾಯು ಹೊರಸೂಸುವಿಕೆಗಳು, ಘನ/ಅಪಾಯಕಾರಿ ತ್ಯಾಜ್ಯ ಮತ್ತು ನೀರಿನ ವಿಸರ್ಜನೆ ಸೇರಿದಂತೆ, ಅನ್ವಯಿಸುವ ನಿರ್ಬಂಧನಾತ್ಮಕ ಅಗತ್ಯತೆಗಳನ್ನು ಪಾಲಿಸುವ ಮೂಲಕ ಗುತ್ತಿಗೆದಾರರು ಮಾನವ ಆರೋಗ್ಯ ಮತ್ತು ಪರಿಸರವನ್ನು ರಕ್ಷಿಸುತ್ತಾರೆ. ಪರಿಸರದ ಮೇಲಾಗುವ ಋಣಾತ್ಮಕ ಕಾರ್ಯಾಚರಣಾ ಪ್ರಭಾವಗಳನ್ನು ಶಮನಗೊಳಿಸಲು ಗುತ್ತಿಗೆದಾರರು ಸೂಕ್ತವಾದ ಕ್ರಮಗಳನ್ನು ಅನುಸರಿಸುತ್ತಾರೆ ಹಾಗೂ ಪಾರಿಸರಿಕ ನಿರ್ವಹಣೆಯನ್ನು ಸುಧಾರಿಸಲು ನಿರಂತರವಾಗಿ ಶ್ರಮಿಸುತ್ತಾರೆ.

## ಸಂಹಿತೆಯನ್ನು ಪೂರ್ಣವಾಗಿ ಅನುಷ್ಠಾನಗೊಳಿಸಲಾಗುತ್ತದೆ

Nike ನೊಂದಿಗೆ ವ್ಯವಹಾರ ಮಾಡುವ ಷರತ್ತಿನಂತೆ, ಗುತ್ತಿಗೆದಾರರು ಈ ಸಂಹಿತೆ ಮತ್ತು ಜೊತೆಗಿರುವ ಸಂಹಿತೆಯ ನಾಯಕತ್ವದ ಮಾನದಂಡಗಳನ್ನು ಹಾಗೂ ಅದರ ವ್ಯವಹಾರಕ್ಕೆ ಅನ್ವಯಿಸುವ ಕಾನೂನುಗಳನ್ನು ಅನುಷ್ಠಾನಗೊಳಿಸುತ್ತಾರೆ ಮತ್ತು ಏಕೀಕೃತಗೊಳಿಸುತ್ತಾರೆ ಹಾಗೂ ದೃಢೀಕರಣಕ್ಕೆ ಹಾಗೂ ಪರಿಶೀಲನೆಗೆ ಸಲ್ಲಿಸುತ್ತಾರೆ. ಗುತ್ತಿಗೆದಾರರು ಈ ಸಂಹಿತೆಯನ್ನು, ಅದರ ನೌಕರರ ಭಾಷೆಯ(ಗಳ)ಲ್ಲಿ, ಎಲ್ಲ ಪ್ರಮುಖ ಕಾರ್ಯಸ್ಥಳಗಳಲ್ಲಿ ಪ್ರಕಟಿಸುತ್ತಾರೆ, ಈ ಸಂಹಿತೆಯಲ್ಲಿ ಹಾಗೂ ಅನ್ವಯಿಸುವ ದೇಶದ ಕಾನೂನುಗಳಲ್ಲಿ ವಿವರಿಸಲಾದ ನೌಕರರ ಹಕ್ಕುಗಳು ಮತ್ತು ಕಟ್ಟುಪಾಡುಗಳನ್ನು ಪ್ರಕಟಿಸುತ್ತಾರೆ; ಮತ್ತು Nike ಬ್ರ್ಯಾಂಡ್ ಅಥವಾ ಸಂಬಂಧಿತ ಉತ್ಪನ್ನಗಳನ್ನು ಉತ್ಪಾದಿಸುವ ಉಪ-ಗುತ್ತಿಗೆದಾರರೂ ಇದನ್ನು ಅನುಸರಿಸುತ್ತಾರೆ ಎಂಬುದನ್ನು ಖಚಿತಪಡಿಸಿಕೊಳ್ಳುತ್ತಾರೆ.